ಓ.ಎಸ್. ನಂ. 240-2013

ದಿನಾಂಕ : 28-8-2015
ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
ಮುಂದುವರೆದ ಪಾಟೀ ಸವಾಲು :

ಸರ್ವೆ ನಂ. 98/8 ಇದನ್ನು 27-4-1955 ರಲ್ಲಿ ಶಿವಪ್ಪನ ಹೆಸರಿಗೆ ಖರೀದಿಸಿದ ಆಸ್ತಿ ಎಂದರೆ ಸರಿ. ಅದನ್ನು ಸೋಮಪ್ಪ ಸುಣದಕುಪ್ಪಿ ಇವರಿಂದ ಖರೀದಿಸಿದ್ದಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ನಾನು ಸೇರಿಸಿರುವುದಿಲ್ಲ. ಏಕೆಂದರೆ ಅದನ್ನು ನನ್ನ ತಂದೆ ಖರೀ ದಿಸಿದ ಆಸ್ತಿ ಎಂದು ಹೇಳುತ್ತಾರೆ. ಸದರಿ ಈ ಆಸ್ತಿಯನ್ನು ನಮ್ಮ ಒಟ್ಟು ಕುಟುಂಬದ ಆದಾಯ ದಿಂದ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ. ಇದನ್ನು ನಾನು ಹುಟ್ಟುವ ಪೂರ್ವದಲ್ಲಿಯೇ ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ. 1962 ರಲ್ಲಿ ನನ್ನ ತಂದೆ ಮತ್ತು ಆತನ ಸಹೋದರರು ವಾಟ್ನಿ ಮಾಡಿಕೊಂಡು ಬೇರೆ ಬೇರೆಯಾಗಿ ವಾಸವಾಗಿದ್ದರು ಎಂದರೆ ಸರಿಯಲ್ಲ. ನಂತರ 1997 ರಲ್ಲಿ ಅದನ್ನು ಲಿಖಿತವಾಗಿ ವಾಟ್ನಿ ಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ಆ ವಾಟ್ನಿ ಪತ್ರಕ್ಕೆ ನಾನೂ ಸಹ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಂತರ ಆ ವಾಟ್ನಿ ಪ್ರಕಾರ ಎಲ್ಲರೂ ಜಂಟಿಯಾಗಿಯೇ ವರದಿ ಕೊಟ್ಟಿದ್ದೆವು ಎಂದರೆ ಸರಿಯಲ್ಲ. ಆ ಬಗ್ಗೆ ಕಂದಾಯ ಇಲಾಖೆಯಿಂದ ಬಂದ ನೋಟೀಸು ಸಹ ನನಗೆ ಜಾರಿ ಆಗಿದೆ ಎಂದರೆ ಸರಿಯಲ್ಲ. ಆ ಪ್ರಕಾರ ಡೈರಿ ಸಂ. 8115 ಸಹ ದಾಖಲಾಯಿತು ಎಂದರೆ ಸರಿಯಲ್ಲ. ಆ ಪ್ರಕಾರ ಸರ್ವೆ ನಂ. 84/1ಬ ಕ್ಷೇತ್ರ 4 ಎಕರೆ 5 ಗುಂಟೆಗೆ ನನ್ನ ಹೆಸರು ದಾಖಲಾಯಿತು ಎಂದರೆ ಸರಿ. ಅದನ್ನು ನಾನು ಸ್ವಾಧೀನತೆ ಹೊಂದಿ ವಹಿವಾಟಿಸುತ್ತಾ ಬಂದಿದ್ದೇನೆ ಎಂದರೆ ಸರಿ. ಮತ್ತು ನಂತರ ನಾನು ಸದರಿ ಈ ಜಮೀನಿನ ಮೇಲೆ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಸಾಲ ಸಹ ಪಡೆ ದಿರುತ್ತೇನೆ ಎಂದರೆ ನಾನು ಪಡೆದಿರುವುದಿಲ್ಲ ಎಂದು ಹೇಳುತ್ತಾರೆ. ಸದರಿ ಸಾಲ ಪಡೆ ದಿರುವುದಕ್ಕೆ ಆ ಬಗ್ಗೆ ಎಂಆರ್ ಸಂ. 135/2004-05 ಸಹ ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಆ ರೀತಿ ನಾನು ಸಾಲ ಪಡೆದಿದ್ದರೂ ಸಹ ಪಡೆದಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವು 1997 ರಲ್ಲಿ ವಾಟ್ನಿ ಮಾಡಿಕೊಂಡು ಬೇರೆ ಬೇರೆ ವಾಸವಾಗಿದ್ದರೂ ಸಹ ಈಗ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ

ಪ್ರತಿವಾದಿ ನನ್ನ ವಿರುದ್ಧ ಪ್ರಧಾನ ಸಿವಿಲ್ ಜಡ್ಜ ಬೈಲಹೊಂಗಲ ನ್ಯಾಯಾಲಯದಲ್ಲಿ ಒಂದು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ವಿರುದ್ಧ ನಿರ್ಭಂಧಕಾಜ್ಞೆ ಆದೇಶ ಸಹ ಹೊರಡಿಸಲಾಗಿದೆ ಎಂದರೆ ಸರಿ, ಸದರಿ ಆ ದಾವೆಯನ್ನು ನನ್ನ ವಿರುದ್ಧ ಸಲ್ಲಿಸಿದ್ದರಿಂದ ನಾನು ಸಿಟ್ಟಾಗಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು 2 ನೇ ಪ್ರತಿವಾದಿ ಪರ ವಕೀಲರಿಂದ</u>

ನಾನು ಜನಿಸುವ ಪೂರ್ವದಲ್ಲಿ ನಮ್ಮ ಮನೆತನದ ಹಿರಿತನವನ್ನು 2 ನೇ ಪ್ರತಿವಾದಿಯೇ ಮಾಡುತ್ತಿದ್ದ ಎಂದರೆ ಸರಿ. ಮತ್ತು ನನ್ನ ತಂದೆ ಹಾಗೂ ನನ್ನ ತಂದೆಯ ಸಹೋದರ ಬಸವಣ್ಣೆಪ್ಪ ಇವರ ಜೊತೆ ಸೇರಿಯೇ 2 ನೇ ಪ್ರತಿವಾದಿ ಹಿರಿತನ ಮಾಡುತ್ತಿದ್ದ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ಸರ್ವೆ ನಂ. 93 ಕ್ಷೇತ್ರ 1 ಎಕರೆ 3 ಗುಂಟೆ, ಸರ್ವೆ ನಂ, 95 ಮತ್ತು ಸರ್ವೆ ನಂ,15, 84 ಇವುಗಳಲ್ಲಿ ಪಾಲು ಕೇಳಿ ಈ ದಾವೆ ಸಲ್ಲಿಸಿರುತ್ತೇನೆ. ಬೇರೆ ಆಸ್ತಿಗಳಲ್ಲಿ ನಾನು ಪಾಲು ಕೇಳಿ ಈ ದಾವೆ ಸಲ್ಲಿಸಿರುವುದಿಲ್ಲ.

ನಾನಾಗಲೀ ಅಥವಾ 2 ನೇ ಪ್ರತಿವಾದಿಯೂಗಲೀ ನಮ್ಮ ಸ್ವಂತ ದುಡಿಮೆಯಿಂದ ಯಾವುದೇ ಜಮೀನನ್ನು ಖರೀದಿಸಿದ್ದು ಇರುವುದಿಲ್ಲ. ದಾವಾ ಶೆಡ್ಯುಲ ಕ್ರಮ ಸಂ. 1 ರ ಆಸ್ತಿಗೆ ನನ್ನ ಹೆಸರು ದಾಖಲಿರುತ್ತದೆ. ಆ ರೀತಿ 4-5 ವರ್ಷಗಳ ಹಿಂದೆ ದಾಖಲಾಗಿರುತ್ತದೆ. ಆದರೆ ನನ್ನ ಹೆಸರು ಯಾವ ಆಧಾರದ ಮೇಲೆ ದಾಖಲಾಗಿದೆ ಎಂದು ಗೊತ್ತಿರುವುದಿಲ್ಲ. ನಾನು ಪ್ರಾಥಮಿಕ ಪತ್ತಿನ ವ್ಯವಸಾಯ ಸೇವಾ ಸಹಕಾರಿ ಸಂಘ ದೇವಲಾಪುರದಲ್ಲಿ 25,000 ಸಾಲವನ್ನು ಸದರಿ ಜಮೀನಿನ ಮೇಲೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ, ಸಿಂಡಿಕೇಟ್ ಬ್ಯಾಂಕ್ ಬೈಲಹೊಂಗಲ ಶಾಖೆಯಲ್ಲಿಯೂ ಸಹ 2004 ರಲ್ಲಿ ಸಾಲ ಪಡೆದಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಮೇಲೆ ಸಾಲ ಪಡೆದಿರುವ ಬಗ್ಗೆ ಬೋಜಾ ದಾಖಲಾಗಿರುವುದನ್ನು ಪ್ರಶ್ನಿಸಿ ನಾನು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ನಾನು ಡೈರಿ ಸಂ. 8115 ನ್ನು ಪ್ರಶ್ನಿಸಿ ಯಾವುದೇ ಮೇಲ್ಮನವಿ ಸಲ್ಲಿಸಿದ್ದು ಇರುವುದಿಲ್ಲ.

2 ನೇ ಪ್ರತಿವಾದಿ ಪರ ವಕೀಲರು ಈ ಮೇಲಿನ 1 ನೇ ಪ್ರತಿವಾದಿ ಪರ ವಕೀಲರು ಮಾಡಿದ ಪಾಟೀ ಸವಲನ್ನೇ ಅನುಮೋದಿಸಿಕೊಂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ

ಹಿ ಪ್ರ ದ ನ್ಯಾ ದಂ, ಬೈಲಹೊಂಗಲ